ದಿನಾಂಕ **11.09.2019**ರಂದು ಬೆಳಿಗ್ಗೆ **11:00**ಗಂಟೆಗೆ ನಡೆದ ಗ್ರಾಮೀಣ ಇಂಧನ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದವರು ; ಪಟ್ಟಿ ಲಗತ್ತಿಸಿದೆ.**

ಶ್ರೀ ಕೆ ರೇವಣಪ್ಪ, ನಿರ್ದೇಶಕರು (ಗ್ರಾಮೂಸೌ-2) ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸಭೆಯಲ್ಲಿ ಉಪಸ್ಥಿತರಿದ್ದವರನ್ನೆಲ್ಲಾ ಸ್ವಾಗತಿಸಿದರು.

1. ನಿರ್ದೇಶಕರು (ಗ್ರಾಮೂಸೌ-2) ರವರು ನವ ರಾಷ್ಟ್ರೀಯ ಜೈವಿಕ ಅನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮ ಹಾಗೂ MGNREGA ಸಹಭಾಗಿತ್ವದಲ್ಲಿ ಪ್ರತಿ ಸ್ಥಾವರ ನಿರ್ಮಾಣಕ್ಕೆ ಅಗತ್ಯವಿರುವ Civil ಕಾಮಗಾರಿಗಳಿಗೆ ಸಂಬಂಧಿಸಿದಂತೆ 20 ಮಾನವ ದಿನಗಳನ್ನು ಸರ್ಕಾರದ ಆದೇಶದನ್ವಯ ಉಪಯೋಗಿಸಿಕೊಳ್ಳತಕ್ಕದ್ದು. ಈ ರೀತಿ ಉಪಯೋಗಿಸಿಕೊಳ್ಳವ ಕಾಮಗಾರಿ ಹಾಗೂ ವೆಚ್ಚದ ವಿವರಗಳನ್ನು ಆಯಾ ಗ್ರಾಮ ಪಂಚಾಯತಿಗಳು MGNREGA Work Soft ನಲ್ಲಿ ಇಂಧೀಕರಿಸಿಕೊಳ್ಳತಕ್ಕದ್ದು.

   (ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು).

2. ಶ್ರೀ ಸತ್ಯೇಂದ್ರ ಪೈ, ಅಧ್ಯಕ್ಷರು, Karnataka State Biogas Technicians Association®, ಬೆಂಗಳೂರು ರವರು NNBOMP ಕಾರ್ಯಕ್ರಮದ ಅನುಷ್ಠಾನದಲ್ಲಿನ ಸಾಧ್ಯಾಸಾಧ್ಯತೆಗಳ ಕುರಿತಂತೆ ಕೆಳಕಂಡ ಅಂಶಗಳನ್ನು ಸಭೆಯ ಗಮನಕ್ಕೆ ತಂದರು.

   - ಬಹುತೇಕ ಜಿಲ್ಲಾ ಪಂಚಾಯತ್‌ಗಳಲ್ಲಿ ಕಾರ್ಯಕ್ರಮದಡಿ ಸಹಾಯಧನ ಮತ್ತು ಟರ್ನ್ ಕೀ ಫೀ ಮತ್ತು ನಿರ್ವಹಣಾ ಮೊತ್ತವನ್ನು ಪಾವತಿಸುವುದು ಬಾಕಿ ಇರುತ್ತದೆ. ಬಾಕಿ ಇರುವ ಮೊತ್ತವನ್ನು ಪೂರ್ಣ ಪಾವತಿಸಿದರೆ ಪ್ರಸಕ್ತ ಸಾಲಿನಲ್ಲಿ ಕಾರ್ಯಕ್ರಮವನ್ನು ಯಶಸ್ವಿ ಹಾಗೂ ಸಮರ್ಪಕವಾಗಿ ನಿರ್ವಹಿಸಲಾಗುವುದು ಹಾಗೂ ಹತ್ತು ಸಾವಿರ ಜೈವಾನಿಲ ಘಟಕಗಳನ್ನು ನಿರ್ಮಿಸಲಾಗುವುದೆಂದು ಬರವಸೆ ನೀಡಿದರು.
   - ಪ್ರಸ್ತುತ ಜಿಲ್ಲಾ ಪಂಚಾಯತ್‌ಗಳಲ್ಲಿ ಟರ್ನ್ ಕೀ ಏಜನ್ಸಿಯನ್ನು ನವೀಕರಿಸಲು ಒಂದು ವರ್ಷದ ಬದಲಾಗಿ 3 ವರ್ಷಗಳಿಗೊಮ್ಮೆ ನವೀಕರಿಸುವುದು ಕಾರ್ಯಕ್ರಮದ ಹಿತದೃಷ್ಟಿಯಿಂದ ಸೂಕ್ತವಾಗುವುದು.
   - ರಾಜ್ಯದ ಕೆಲವು ಜಿಲ್ಲೆ / ತಾಲ್ಲೂಕು / ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ 10 ಘನ ಮೀಟರ್‌ಕ್ಕಿಂತ ಹೆಚ್ಚಿನ ಸಾಮರ್ಥ್ಯದ ಘಟಕಗಳನ್ನು(ಉದಾ: Solid Waste, Kitchen waste ಇತ್ಯಾದಿ) ಸ್ಥಾವರಗಳನ್ನು BBMP ಹಾಗೂ ಪುರ ಸಭಾ ವ್ಯಾಪ್ತಿಯಲ್ಲಿ ನಿರ್ಮಿಸಲಾಗುತ್ತಿದ್ದು, ಈ ಘಟಕಗಳನ್ನು ನಿರ್ದಿಷ್ಟ ತಾಂತ್ರಿಕತೆ ಇಲ್ಲದೇ ಹಾಗೂ ನಿರ್ವಹಣೆ ಇಲ್ಲದೇ ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದು ತಮ್ಮ ಸಂಘದ ಗಮನಕ್ಕೆ ಬಂದಿರುತ್ತದೆ(ಪತ್ರಿಕಾ ಪ್ರಕಟಣೆಯ Cutting ನ್ನು ಸಭೆಯ ಗಮನಕ್ಕೆ ತಂದರು).

/.

- ಇದರಿಂದಾಗಿ ಸುಮಾರು 35 ವರ್ಷಗಳಿಂದ ಗೋಬರ್ ಗ್ಯಾಸ್ ಸ್ಥಾವರಗಳ ನಿರ್ಮಾಣದಲ್ಲಿ ನಿರ್ದಿಷ್ಟ ತಾಂತ್ರಿಕತೆ ಹಾಗೂ ಅನುಭವ ಹೊಂದಿರುವ ನಮ್ಮ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಪೆಟ್ಟು ಬಿದ್ದಂತಾಗಿದೆ ಹಾಗೂ Image ಗೆ ಧಕ್ಕೆಯುಂಟಾಗಿದೆ. ಆದ್ದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 10 ಘನ ಮೀಟರ್‌ಕ್ಕಿಂತ ಹೆಚ್ಚಿನ ಸಾಮರ್ಥ್ಯದ ಘಟಕಗಳನ್ನು ನಿರ್ಮಿಸಬಹುದಾದ ಉದ್ದೇಶ ಹೊಂದಿದ BBMP, ನಗರ ಸಭೆ ಹಾಗೂ ಪುರ ಸಭೆಗಳು Karnataka State Biogas Technicians Association®, ಬೆಂಗಳೂರು ಇದರ ಮೂಲಕ ಘಟಕಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸುವಂತೆ ನಗರ ಅಭಿವೃದ್ಧಿ ಇಲಾಖೆಯನ್ನು ಸರ್ಕಾರದ ವತಿಯಿಂದ ಕೋರುವುದು.
- ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಹೊಂದಿದ ಜಿಲ್ಲೆಗಳು (ಉದಾ: ಬೆಂಗಳೂರು(ನ) ಮತ್ತು ಬೆಂಗಳೂರು(ಗ್ರಾ), ಬೆಳಗಾವಿ, ದಕ್ಷಿಣ ಕನ್ನಡ, ತುಮಕೂರು, ಶಿವಮೊಗ್ಗ ಇತ್ಯಾದಿ) ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ Infosys, ITBT ಹಾಗೂ MRP ಇತ್ಯಾದಿ ನಿರ್ಮಿತಗೊಂಡ ಕೈಗಾರಿಕೆಗಳ Public Relation Officer ನ್ನು ಭೇಟಿ ಮಾಡಿ ಕೈಗಾರಿಕೆಗಳಡಿ ಕಾಯ್ದಿರಿಸಿದ CSR Fund ನ್ನು ಮಾಲಿನ್ಯ ರಹಿತ ಪರಿಸರವನ್ನಾಗಿ ಉಂಟು ಮಾಡಲು ದೊಡ್ಡ ದೊಡ್ಡ ಗಾತ್ರದ ಸ್ಥಾವರಗಳ ನಿರ್ಮಾಣಕ್ಕಾಗಿ ನೀಡುವಂತೆ ಕೋರುವುದು. CSR Fund ನ್ನು ಪಡೆಯುವ ನಿಟ್ಟಿನಲ್ಲಿ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಸರ್ಕಾರದ ವತಿಯಿಂದ ಕ್ರಮ ಕೈಗೊಳ್ಳುವುದು.
- ಕೇಂದ್ರ ಸರ್ಕಾರದ ಅನುಮೋದಿತ ಮಾದರಿಯನ್ವಯ ದೊಡ್ಡ ಗಾತ್ರದ ಸ್ಥಾವರಗಳ ನಿರ್ಮಾಣದಲ್ಲಿ ಉತ್ತಮ ತಾಂತ್ರಿಕತೆ, ನಿರ್ವಹಣೆ ಬಹಳ ಅಗತ್ಯವಿರುತ್ತದೆ.
- NNBOMP ಕಾರ್ಯಕ್ರಮವನ್ನು ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಏಕ ರೂಪವಾಗಿ ಸಮಗ್ರ ವಿಷಯಗಳನ್ನೊಳಗೊಂಡ ಸುತ್ತೋಲೆಯನ್ನು ಹೊರಡಿಸುವುದು.
- ಇಲಾಖಾ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತಿ, Middy Meals ಹೊಂದಿದ ಶಾಲೆಗಳು, ವಿದ್ಯಾರ್ಥಿ ನಿಲಯಗಳು, ಸಾರ್ವಜನಿಕ ಆಸ್ಪತ್ರೆ, ಗೋ ಶಾಲೆ, ಆಶ್ರಮಗಳು ಇತ್ಯಾದಿ ಸ್ಥಳಗಳಲ್ಲಿ Kitchen Waste ಹಾಗೂ Solid Waste Management) ದೊಡ್ಡ ದೊಡ್ಡ ಗಾತ್ರದ ಸ್ಥಾವರಗಳನ್ನು ನಿರ್ಮಿಸಲು ತಮ್ಮ ಸಂಘಕ್ಕೆ ಗುರಿಯನ್ನು ನಿಗದಿಪಡಿಸುವಂತೆ ಕೋರಿದರು.

ಶ್ರೀ ಸತ್ಯೇಂದ್ರ ಪೈ, ಅಧ್ಯಕ್ಷರು, Karnataka State Biogas Technicians Association®, ಬೆಂಗಳೂರು ರವರು ಸಭೆಗೆ ತಂದ ವಿಷಯಗಳ ಕುರಿತಂತೆ ತಮ್ಮ ಸಂಘದ ವತಿಯಿಂದ ಮನವಿ ನೀಡುವಂತೆ ಸೂಚಿಸಿದರು.

(ಕ್ರಮ: ಅಧ್ಯಕ್ಷರು, Karnataka State Biogas Technicians Association®, ಬೆಂಗಳೂರು)

3. ಕೇಂದ್ರ ಸರ್ಕಾರವು ಬಿಡುಗಡೆ ಮಾಡುವ ಕೇಂದ್ರ ಸಹಾಯಧನವು ವಿಳಂಬವಾಗುತ್ತಿದ್ದಲ್ಲಿ ಜಿಲ್ಲಾ ಪಂಚಾಯತ್‌ಗಳಲ್ಲಿ ರಾಜ್ಯ ಸಹಾಯಧನ ಲಭ್ಯತೆ ಇದ್ದಲ್ಲಿ ಅಂತಹ ಅನುದಾನವನ್ನು ಮರುಹೊಂದಾಣಿಕೆ / Book Adjustment ಮಾಡಿಕೊಳ್ಳುವ ಕುರಿತಂತೆ ಸಭೆಯಲ್ಲಿ ಚರ್ಚಿಸಿದ್ದು, ಈ ಕುರಿತು ಆರ್ಥಿಕ ಇಲಾಖೆಯ ಸಹಮತಿ ಕೋರುವ ಕುರಿತಂತೆ ತೀರ್ಮಾನಿಸಲಾಯಿತು.

(ಕ್ರಮ: ನಿರ್ದೇಶಕರು(ಗ್ರಾಮೂಸೌ-2), ಗ್ರಾಅಪ ಇಲಾಖೆ.)

4. ಶ್ರೀ ಜಿ. ಎಲ್. ಬದಿ, ಯೋಜನಾ ಅಭಿಯಂತರರು, ಜಿ.ಪಂ. ಬಳ್ಳಾರಿ ಇವರನ್ನು ಕೊಪ್ಪಳ ಜಿಲ್ಲೆಯ ಹೆಚ್ಚುವರಿ ಉಸ್ತುವಾರಿಯೊಂದಿಗೆ ರಾಯಚೂರು ಜಿಲ್ಲೆಯ ಉಸ್ತುವಾರಿಯನ್ನು ನಿರ್ವಹಿಸಲು ತೀರ್ಮಾನಿಸಲಾಯಿತು.

(ಕ್ರಮ: ನಿರ್ದೇಶಕರು(ಗ್ರಾಮೂಸೌ-2), ಗ್ರಾಅಪ ಇಲಾಖೆ.)

5. CEO, ZP, ಉಡುಪಿ ರವರ ಪತ್ರ ದಿನಾಂಕ 26.08.2019ರ ಕೋರಿಕೆ ಮೇರೆಗೆ ಹಾಗೂ ಕಾರ್ಯಕ್ರಮದ ಪ್ರಗತಿಯ ಹಿತದೃಷ್ಟಿಯಿಂದ 2019-20ನೇ ಸಾಲಿಗೆ ಅನ್ವಯವಾಗುವಂತೆ ಶ್ರೀ ಎ. ಆರ್. ದತ್ತಾತ್ರಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾಸನ ರವರನ್ನು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ NNBOMP ಕಾರ್ಯಕ್ರಮದಡಿ ನಿರ್ಮಿಸಲಾಗುವ ಸ್ಥಾವರಗಳನ್ನು ಪರಿಶೀಲಿಸಿ ದೃಢೀಕರಣವನ್ನು CEO, ZP, ದಕ್ಷಿಣ ಕನ್ನಡ ಹಾಗೂ ಉಡುಪಿ ರವರಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

(ಕ್ರಮ: ನಿರ್ದೇಶಕರು(ಗ್ರಾಮೂಸೌ-2), ಗ್ರಾಅಪ ಇಲಾಖೆ.)

6. ಶ್ರೀ ಟಿ. ಎಸ್. ಬಸವರಾಜಪ್ಪ, ಯೋಜನಾ ಅಭಿಯಂತರರು, ಜಿಲ್ಲಾ ಪಂಚಾಯತ್, ದಾವಣಗೆರೆ ರವರು ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 22 ಆರ್ ಇ ಪಿ 2019, ದಿನಾಂಕ 28.08.2019ರನ್ವಯ ಬೆಳಗಾವಿ ಜಿಲ್ಲೆ ರೂ.67.00ಲಕ್ಷಗಳನ್ನು ವರ್ಗಾಯಿಸಬೇಕಿದೆ. ದಾವಣಗರೆ ಜಿಲ್ಲಾ ಪಂಚಾಯತ್ ನಲ್ಲಿ ಕಾರ್ಯಕ್ರಮದಡಿ ಸಹಾಯಧನ ಪಾವತಿಗಾಗಿ ಬಿಲ್ಲುಗಳು ಬಾಕಿ ಇದ್ದು, ಇದನ್ನು ಹೊರತುಪಡಿಸಿ ಬಾಕಿ ಉಳಿಯುವ ಅನುದಾನ ವರ್ಗಾಯಿಸಲು ಕ್ರಮ ಕೈಗೊಳ್ಳುವ ಕುರಿತಂತೆ ಸಭೆಯ ಗಮನಕ್ಕೆ ಬಂದರು. ಆದರೆ ನಿರ್ದೇಶಕರು(ಗ್ರಾಮೂಸೌ-2) ರವರ ಸರ್ಕಾರದ ಆದೇಶದ ಪಾಲನೆಯನ್ನು ಮಾಡುವಂತೆ ಹಾಗೂ ಅನುದಾನದ ಅಗತ್ಯತೆ ಕುರಿತಂತೆ ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಸೂಚಿಸಿದರು.

(ಕ್ರಮ:ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್, ದಾವಣಗೆರೆ)

7. ಶಿವಮೊಗ್ಗ ಜಿಲ್ಲೆಯ ಟರ್ನ್ ಕೀ Worker ಯಾದ ಶ್ರೀ ಗದಿಗೇಶ್ ರವರು ಶಿವಮೊಗ್ಗ ಜಿಲ್ಲೆಗೆ ನಿಗದಿಪಡಿಸಿದ ಗುರಿಯನ್ನು ಹಂಪಡೆದಿರುವ ಕುರಿತಂತೆ ತಿಳಿಸುತ್ತಾ, ತಮ್ಮ ಜಿಲ್ಲೆಗೆ 1000 ಜೈವಾನಿಲ ಸ್ಥಾವರಗಳ ಭೌತಿಕ ಗುರಿಯನ್ನು ನೀಡುವಂತೆ ಕೋರಿದರು. ನಿರ್ದೇಶಕರು(ಗ್ರಾಮೂಸೌ-2) ರವರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಶಿವಮೊಗ್ಗ ರವರ ಮೂಲಕ ತಿಳಿಸುವಂತೆ ಸೂಚಿಸಿದರು.

8. ಕಾರ್ಯಕ್ರಮದಡಿ 2018-19ನೇ ಸಾಲಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸದೇ ಇರುವ ಬಾಗಲಕೋಟೆ, ಬಳ್ಳಾರಿ, ಬೀದರ್, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಧಾರವಾಡ, ಕೋಲಾರ, ಕೊಪ್ಪಳ ಮತ್ತು ರಾಮನಗರ ಜಿಲ್ಲಾ ಪಂಚಾಯತ್ ಗಳಿಗೆ ಕೂಡಲೇ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

(ಕ್ರಮ:ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

9. ಕಾರ್ಯಕ್ರಮದಡಿ ನಿರ್ಮಿಸಲಾದ ಘಟಕಗಳ ಕುರಿತಂತೆ ನವೀಕರಿಸಬಹುದಾದ ತಾಂತ್ರಿಕತೆಯನ್ನು ಹೊಂದಿದ ವಿವಿಧ ಸಾಮರ್ಥ್ಯವಾರು ಘಟಕಗಳ ನಿರ್ಮಾಣ, ಕಾರ್ಯಕ್ಷಮತೆ, ಪ್ರಯೋಜನ ಹಾಗೂ ನಿರ್ವಹಣೆ ಕುರಿತಂತೆ ಯಶೋಗಾಥೆಗಳನ್ನು ಸೂಕ್ತ ವರದಿ ಹಾಗೂ Colour ಛಾಯಚಿತ್ರದೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಕ್ರಮ ವಹಿಸುವುದು.

(ಕ್ರಮ:ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು).

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಕೆ. ರೇವಣಪ್ಪ)
ನಿರ್ದೇಶಕರು(ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕಡತ ಸಂಖ್ಯೆ:ಗ್ರಾಅಪ/29/ಜೈಅಯೋ/2019 ಬೆಂಗಳೂರು, **ದಿನಾಂಕ.19.09.2019.**

ಗೆ:

1. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು(ಸಗ್ರಾಇಂಕಾ).

ಪ್ರತಿಯನ್ನು,

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಅಪ ಇಲಾಖೆ.
2. ಅಧ್ಯಕ್ಷರು, Karnataka State Biogas Technicians Association®, ಬೆಂಗಳೂರು ರವರು
3. ಇಲಾಖಾ ಗಣಕಜಾಲ, ಗ್ರಾಅಪ ಇಲಾಖೆ.
4. ರಕ್ಷ ಕಡತ / ಹೆಚ್ಚುವರಿ ಪ್ರತಿ.

**ದಿನಾಂಕ 11.09.2019 ರಂದು ನಡೆದ ಗ್ರಾಇಂಕಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಾಜರಾದವರ ಪಟ್ಟಿ.**

1. ಶ್ರೀ ಕೆ. ರೇವಣಪ್ಪ, ನಿರ್ದೇಶಕರು (ಗ್ರಾಮೂಸೌ-2) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಶ್ರೀಮತಿ ಭಾಗ್ಯಶ್ರೀ ಹೆಚ್. ಎಸ್. ಉಪ ನಿರ್ದೇಶಕರು(ಗ್ರಾಮೂಸೌ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಶ್ರೀಮತಿ ನೇತ್ರಾವತಿ, ಅಧೀಕ್ಷಕರು, ಗ್ರಾಮೂಸೌ-2, ಗ್ರಾಅಪಂ. ರಾಜ್ ಇಲಾಖೆ.
4. ಶ್ರೀ ಮಾರ್ಕಂಡಯ್ಯ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್ ಬಾಗಲಕೋಟೆ & ವಿಜಯಪುರ.
5. ಶ್ರೀ ಎಂ. ಎಸ್. ಸುದರ್ಶನ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಂಗಳೂರು(ಗ್ರಾ), ಚಿಕ್ಕಬಳ್ಳಾಪುರ ಮತ್ತು ಕೋಲಾರ.
6. ಶ್ರೀ ಶಿವಣ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಂಗಳೂರು(ನ).
7. ಶ್ರೀ ಜಿ. ಎಲ್. ಬದಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬಳ್ಳಾರಿ & ಕೊಪ್ಪಳ.
8. ಶ್ರೀ ಬಸವರಾಜ್ ಯಲಬುರಗಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಮಂಡ್ಯ & ಚಾಮರಾಜನಗರ.
9. ಶ್ರೀ ಶೇಕ್ ಅಹಮ್ಮದ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಚಿತ್ರದುರ್ಗ.
10. ಶ್ರೀ ಬಸವರಾಜಪ್ಪ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ದಾವಣಗೆರೆ ಮತ್ತು ಶಿವಮೊಗ್ಗ.
11. ಶ್ರೀ ದತ್ತಾತ್ರಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾಸನ, ಚಿಕ್ಕಮಗಳೂರು ಮತ್ತು ಕೊಡಗು.
12. ಶ್ರೀ ಉತ್ತಮ ಕುಮಾರ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾವೇರಿ & ಗದಗ.
13. ಶ್ರೀ ಶ್ರೀನಿವಾಸ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ತುಮಕೂರು.
14. ಶ್ರೀ ಎಸ್. ಮುರ್ತುಜಾ ಆಲಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಮೈಸೂರು.
15. ಶ್ರೀ ನಂಜುಂಡೇ ಗೌಡ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ರಾಮನಗರ.
16. ಶ್ರೀ ಎಸ್. ಪಿ. ಪಾಟೀಲ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೀದರ್, ಕಲಬುರಗಿ ಮತ್ತು ಯಾದಗಿರಿ.
17. ಶ್ರೀ ಸತ್ಯೇಂದ್ರ ಪೈ, ಅಧ್ಯಕ್ಷರು, Karnataka State Biogas Technicians Association®, ಬೆಂಗಳೂರು.

ಗೈರುಹಾಜರಾದವರು,

1. ಶ್ರೀ ಕೃಷ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಉತ್ತರ ಕನ್ನಡ.
2. ಶ್ರೀ ಶಿವಾನಂದ ಕಮತಗಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಳಗಾವಿ.

-0-0-